ಬಣ್ಣದಲ್ಲಿ ಅರಳಿದ ತಾವರೆ, ಕಾಮಧೇನು, ಗೋವರ್ಧನಗಿರಿಯನ್ನು ಕಿರುಬೆರಳಿನಿಂದ ಎತ್ತಿಕೊಂಡ ಬಾಲಕೃಷ್ಣ... ಹೀಗೆ ನಾನಾ ವಿಧದ ಪೇಂಟಿಂಗ್‌ಗಳು ಇದೀಗ ಸದ್ದು ಮಾಡುತ್ತಿವೆ. ಇವನ್ನೇ ಜನರು ಡಿಜಿಟಲ್ ಪ್ರಿಂಟಾಗಿ ಚಿತ್ರಿಸಿ ಮನೆಯನ್ನು ಅಲಂಕರಿಸಿಕೊಳ್ಳುತ್ತಿದ್ದಾರೆ. ಬಟ್ಟೆಗಳ ಮೇಲೂ ಇದೇ ವಿನ್ಯಾಸ ಚಿತ್ರಿಸಿ ಮಹಿಳೆಯರು ಫ್ಯಾಷನ್ ಮೆರೆಯುತ್ತಿದ್ದಾರೆ.

ಸಾಂಪ್ರದಾಯಿಕ ಪಿಚ್ವಾಯ್ ಕಲೆ ಇದೀಗ ಹೊಸ ರೂಪ ಪಡೆದಿದೆ. ಮದುವೆ ಮಂಟಪಗಳಿಗೆ ಹೂವಿನ ಅಲಂಕಾರ, ಲೈಟಿಂಗ್‌ಗಳ ಮೆರುಗು ಮುಂತಾದ ಥೀಮ್‌ಗಳನ್ನು ಅಳವಡಿಸಿಕೊಂಡು ಸುಂದರವಾಗಿ ಅಲಂಕರಿಸುವುದು ಸಂಪ್ರದಾಯ.

ಸ್ವಲ್ಪ ದಿನಗಳ ಹಿಂದೆ ಬರೀ ಮನೆ ಅಲಂಕಾರದ ಪೇಂಟಿಂಗ್‌ಗಳಿಗೆ ಸೀಮಿತವಾಗಿದ್ದ ಈ ವಿನ್ಯಾಸ ಇದೀಗ ಸೀರೆ, ಬ್ಲೌಸ್, ದುಪಟ್ಟಾ, ಡ್ರೆಸ್‌ಗಳ ಮೇಲೂ ಹರಿದಾಡುತ್ತಿದೆ. ಮುಖ್ಯವಾಗಿ ಶುಭಕಾರ್ಯ, ಮದುವೆ, ಗೃಹಪ್ರವೇಶಕ್ಕೆ ಸಾಂಪ್ರದಾಯಿಕ ಸಮಾರಂಭಗಳಿಗೆ ಹೋಗುವಾಗ ನಾವು ಸೀರೆ ಧರಿಸುವುದು ಸಹಜ. ಹಾಗೇ ಗ್ರ್ಯಾಂಡ್ ಲುಕ್ ನೀಡುವ ಸೀರೆ ಧರಿಸುವುದೆಂದರೆ ಮಹಿಳೆಯರಿಗೆ ಎಲ್ಲಿಲ್ಲದ ಆಸಕ್ತಿ. ಅದರಲ್ಲೂ ಯಾರು ಧರಿಸದೇ ಇರುವ ಸಾಂಪ್ರದಾಯಿಕ ಕಲೆಯಿಂದ ಅಲಂಕರಿಸಿದ ಸೀರೆ ಎಂದರೆ ಯಾರಿಗೆ ಇಷ್ಟ ಇಲ್ಲ ಹೇಳಿ?. ಹಾಗಾಗಿ ಈಗ ಎಲ್ಲ ಮಹಿಳೆಯರ ಕಣ್ಣು ಈ ಪಿಚ್ವಾಯ್ ವಿನ್ಯಾಸದ ಸೀರೆಗಳ ಮೇಲೆ ನೆಟ್ಟಿದೆ ಎಂದರೆ ನಂಬಲೇಬೇಕು. ಅದರಲ್ಲೂ ತಾವರೆ ಹೂಗಳಲ್ಲಿ ಅರ್ಧ ಮಡಚಿಕೊಂಡಂತೆ ಎಲೆಗಳಿಂದ ಕೂಡಿದ ಚಿತ್ರಗಳು, ಮೈತುಂಬಾ ಆಭರಣ ತೊಟ್ಟು, ನವಿಲುಗರಿಯಿಂದ ಅಲಂಕರಿಸಿಕೊಂಡ ಬಾಲಕೃಷ್ಣನ ರೂಪ, ಯಶೋದೆ ತನ್ನ ಮುದ್ದು ಕೃಷ್ಣನ ಬಣ್ಣಗಳ ಉಡುಗೆ ಆಭರಣಗಳಿಂದ ಅಲಂಕರಿಸಿ ಸಂಭ್ರಮಿಸುತ್ತಿರುವುದು, ಬಿಳಿ ಬಣ್ಣದ ಹಸುವಿನ ಜೊತೆ ಕೊಳಲನೂದುವ ಕೃಷ್ಣ, ಕೃಷ್ಣ ರಾಧೆಯರ ನೃತ್ಯದ ಭಂಗಿ ಹೀಗೆ ಸಾಕಷ್ಟು ವಿನ್ಯಾಸಗಳು ಇದೀಗ ಸೀರೆಗಳ ಮೇಲೆ ರಾರಾಜಿಸುತ್ತಿವೆ. ಇವುಗಳ ಜೊತೆ ಸಿಂಪಲ್ಲಾಗಿರುವ ಸೀರೆ ಧರಿಸುವವರಿಗೋಸ್ಕರ ಬರೀ ಸೀರೆಗಳ ಸೆರಗಿನಲ್ಲಿ ಮಾತ್ರವೇ ಈ ವಿನ್ಯಾಸವಿರುವ ಸೀರೆಗಳೂ ಇದೀಗ ಮಾರುಕಟ್ಟೆಯಲ್ಲಿ ಲಭ್ಯ.

ಹಾಗೇ ಪ್ಲೇನ್ ಕಾಟನ್ ಸೀರೆ ಧರಿಸುವವರು ಬ್ಲೌಸ್‌ನ ಹಿಂಭಾಗದಲ್ಲಿ ಈ ವಿನ್ಯಾಸ ಮಾಡಿಸಿಕೊಳ್ಳಬಹುದು. ಇವುಗಳ ಜೊತೆಗೆ ಇದೀಗ ಇದೇ ವಿನ್ಯಾಸದ ದುಪಟ್ಟಾಗಳೂ ಮಾರುಕಟ್ಟೆಯಲ್ಲಿ ಲಭ್ಯವಿವೆ. ಪ್ಲೇನ್ ಸಲ್ವಾರ್ ಮೇಲೆ ಈ ವಿನ್ಯಾಸದ ದುಪಟ್ಟಾ ಸಖತ್ತಾಗಿ ಕಾಣುತ್ತದೆ. ಹಾಗೇ ಸಂಪ್ರದಾಯಕ್ಕೂ ಸೈ ಮತ್ತು ಮಾಡರ್ನ್ ಲುಕ್‌ಗೂ ಸೈ ಎನ್ನುವಂತೆ ಈ ವಿನ್ಯಾಸದ ಸೀರೆಗಳನ್ನು ಹಾಗೂ ಗೌನ್‌ಗಳನ್ನೂ ಶುಭ ಸಮಾರಂಭಕ್ಕೆ ಹಾಗೂ ಪಾರ್ಟಿಗಳಿಗೂ ಧರಿಸಬಹುದು.



ನಿಮ್ಮ ನಿಮ್ಮ ಅಭಿರುಚಿಗೆ ಅನುಗುಣವಾಗಿ ಕೆಲವೊಂದು ಬ್ಯುಟಿಕ್‌ಗಳಲ್ಲಿ ಇದಕ್ಕೆ ಪ್ರತ್ಯೇಕವಾದ ಫ್ಯಾಷನ್ ತಜ್ಞೆಯರು ಲಭ್ಯವಾಗಿದ್ದಾರೆ. ಇನ್ನು ಈ ಪಿಚ್ವಾಯ್ ಪೇಂಟಿಂಗ್‌ಗಳನ್ನೇ ಹೆಣ್ಣು ಮಕ್ಕಳು ಕೊಂಡೊಯ್ಯುವ ಬ್ಯಾಗ್, ಪರ್ಸ್‌ಗಳ ಮೇಲೂ ಚಿತ್ರಿಸಲಾಗುತ್ತಿದೆ. ಸೀರೆಗಳ ಜೊತೆಗೆ ನಿಮಗಿಷ್ಟವಾದ ಇದೇ ವಿನ್ಯಾಸದ ಬ್ಯಾಗ್, ಪರ್ಸ್‌ಗಳನ್ನು ಮ್ಯಾಚ್ ಮಾಡಿ ಕೊಂಡೊಯ್ಯಬಹುದು. ■



# ತಲೆಗೂದಲ ಆರೈಕೆಗೆ ದಾಸವಾಳ

ದಾಸವಾಳ ಅಥವಾ ಹೈಬಿಸ್ಕಸ್ ಅಪಾರ ಔಷಧೀಯ ಗುಣಗಳನ್ನು ಒಡಲಲ್ಲಿ ತುಂಬಿಕೊಂಡಿದೆ. ಸೌಂದರ್ಯವರ್ಧನೆಯಲ್ಲಿ ದಾಸವಾಳದ ಪಾತ್ರ ಅಪರಿಮಿತ. ತಲೆಗೂದಲ ಆರೋಗ್ಯಕ್ಕೂ ದಾಸವಾಳ ಸಹಕಾರಿ. ಮನೆಯಂಗಳದಲ್ಲಿ ಬೆಳೆಯುವ ದಾಸವಾಳ ಹೂವಿನ ಗಿಡದ ಎಲೆ, ಹೂವು ಎಲ್ಲವೂ ತಲೆಗೂದಲ ಆರೈಕೆಗೆ ಅತ್ಯಂತ ಸೂಕ್ತವಾದ ಔಷಧೀಯ ಗುಣ ಹೊಂದಿರುವ ಸಸ್ಯ ಸಂಜೀವಿನಿ.

ದಾಸವಾಳ ಹೂವುಗಳನ್ನು (ಐದು ಎಸಳಿನ ಬಿಳಿ ದಾಸವಾಳ ಹೆಚ್ಚಿನ ಔಷಧೀಯ ಗುಣ ಹೊಂದಿದೆ) ತಂದು ಚೆನ್ನಾಗಿ ತೊಳೆದು ಒಂದು ದೊಡ್ಡ ಬೌಲ್‌ನಲ್ಲಿ ಹಾಕಿ. ಇದಕ್ಕೆ ಒಂದು ದೊಡ್ಡ ಲೋಟ ನೀರು ಹಾಕಿ ಚೆನ್ನಾಗಿ ಕಿವುಚಿದ ಬಳಿಕ ಒಂದು ಚಮಚ ಆಲಿವ್ ಆಯಿಲ್ ಹಾಕಿ. ಇಲ್ಲದಿದ್ದರೆ ತೆಂಗಿನಹಾಲು ಒಂದು ಚಮಚ ಹಾಕಿದರೂ ಆಗಬಹುದು. ಈ ಮಿಶ್ರಣವನ್ನು ತಲೆಸ್ನಾನ ಮಾಡುವಾಗ ಸ್ವಲ್ಪ ಸ್ವಲ್ಪವೇ ಕೂದಲ ಬುಡಭಾಗಕ್ಕೆ ಎರೆಯುತ್ತಾ ತಲೆಗೂದಲು ತೊಳೆದುಕೊಂಡರೆ ಕೂದಲು ಉದುರುವ ಸಮಸ್ಯೆಗೆ ಪರಿಹಾರ ಸಿಗುತ್ತದೆ.

'ದಾಸವಾಳದ ಎಲೆ ಹಾಗೂ ಭೃಂಗರಾಜ ಗಿಡದ ಎಲೆಗಳನ್ನು ತೊಳೆದು ಪೇಸ್ಟ್ ಮಾಡಿಕೊಂಡು ತಲೆಗೆ ಹಚ್ಚಿಕೊಳ್ಳಿ. (ಮೆಹೆಂದಿ, ಮೆಂತ್ಯ ಪೇಸ್ಟ್ ಹಚ್ಚಿಕೊಳ್ಳುವ ರೀತಿಯಲ್ಲೇ) ಸುಮಾರು 45 ನಿಮಿಷ ಹಾಗೇ ಬಿಡಿ. ನಂತರ ಉತ್ತಮ ಗುಣಮಟ್ಟದ ಶಾಂಪು ಬಳಸಿ ತಲೆಗೂದಲು ತೊಳೆದುಕೊಳ್ಳಿ. ಇದು ಕೂದಲನ್ನು ಕಪ್ಪಾಗಿಸುತ್ತದೆ. ಕೆಂಚುಕೂದಲ ಸಮಸ್ಯೆ ನಿವಾರಿಸುತ್ತದೆ' ಎಂದು ವಿವರಿಸುತ್ತಾರೆ ಆಯುರ್ವೇದ ವೈದ್ಯೆ ಡಾ. ಅನ್ನಪೂರ್ಣಾ ಭಟ್!

ತಲೆಹೊಟ್ಟು, ತಲೆಗೂದಲು ಉದುರುವುದು ಇಂದು ಬಹುತೇಕ ಎಲ್ಲರ ಸಾಮಾನ್ಯ ಸಮಸ್ಯೆ. ಇದರ ನಿವಾರಣೆಗೆ ಆಯುರ್ವೇದದಲ್ಲಿ ಉತ್ತಮ ಔಷಧಿಗಳಿವೆ.

ತಲೆಹೊಟ್ಟು ನಿವಾರಣೆಗೆ ಹೀಗೆ ಮಾಡಿ...

- ಮೆಹೆಂದಿ ಎಲೆಯ ಪುಡಿಯನ್ನು ಹುಳಿ ಮೊಸರಿನಲ್ಲಿ ಕಲಸಿ ಎರಡು ಗಂಟೆ ಕಾಲ ಇಟ್ಟು ತಲೆಗೆ ಹಚ್ಚಿ. ನಂತರ ಕಡಲೆ ಹಿಟ್ಟು ಮತ್ತು ಸೀಗೆ ಪುಡಿ ಮಿಶ್ರಣದಿಂದ ತಲೆಯನ್ನು ಸ್ವಚ್ಛಗೊಳಿಸಿ.
- ಅಲೊವೆರಾ ತಿರುಳನ್ನು ನೆನೆಸಿದ ದಾಸವಾಳದ ಎಲೆಗಳ ಜೊತೆ ರುಬ್ಬಿ ಹಚ್ಚುವುದು.
- ಒಂದು ಹಿಡಿ ಮೆಂತೆಯನ್ನು ರಾತ್ರಿ ನೀರಿನಲ್ಲಿ ನೆನೆಸಿ ಬೆಳಗ್ಗೆ ಅದನ್ನು ರುಬ್ಬಿ ಅದರ ಜೊತೆ ಒಣ ನೆಲ್ಲಿಕಾಯಿ ಪುಡಿಯನ್ನು ಕಲಸಿ, ಕೂದಲಿನ ಬುಡಕ್ಕೆ ಚೆನ್ನಾಗಿ ಹಚ್ಚಿ ಅರ್ಧ ಗಂಟೆಯ ನಂತರ ಸ್ನಾನ ಮಾಡಿ.

ತಲೆ ಕೂದಲು ಉದುರುತ್ತಿದ್ದರೆ ಈ ಮದ್ದು ಮಾಡಿ...

- ಅರ್ಧ ಚಮಚ ಕಾಳುಮೆಣಸು, ಮೆಂತೆ ಅರ್ಧ ಚಮಚ, ದಾಸವಾಳ ಎಲೆ ಇವುಗಳನ್ನು ರುಬ್ಬಿ, ಬೆಚ್ಚನೆ ಮಾಡಿ, ತಲೆ ಕೂದಲಿನ ಬೇರಿಗೆ ಹಚ್ಚಿ, ಅರ್ಧ ಗಂಟೆಯ ನಂತರ ಸ್ನಾನ ಮಾಡಿ.
- ಎರಡು ಚಮಚ ಗರುಗ ಸೊಪ್ಪಿನ (ಭೃಂಗ ರಾಜ) ರಸ ಮತ್ತು ಒಂದು ಚಮಚ ಜೇನುತುಪ್ಪವನ್ನು ಸೇರಿಸಿ ತಲೆ ಕೂದಲಿನ ಬುಡಕ್ಕೆ ಹಚ್ಚಿ ಸ್ವಲ್ಪ ಸಮಯದ ನಂತರ ಸ್ನಾನ ಮಾಡಿ.

■ ಸುಮನಾ ಜಿ. ಪ್ರಸಾದ್